## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸುವ ಹಿಂದುಳಿದ ವರ್ಗಗಳ ಜನರು ಮಡಿವಾಳ ಸಮಾಜದವರ ದೋಬಿ ಘಾಟ್ ಅಭಿವೃದ್ಧಿಪಡಿಸಲು ರೂಪಿಸಿರುವ ಮಾರ್ಗಸೂಚಿಗೆ ಅನುಮೋದನೆ ಕುರಿತು.

ಓದಲಾಗಿದೆ : 1) 2014-15ನೇ ಸಾಲಿನ ಆಯವ್ಯಯದ ಭಾಷಣ

2) ಸರ್ಕಾರದ ಆದೇಶ ಸಂಖ್ಯೆ: ಹಿಂವಕ 858 ಬಿಎಂಎಸ್ 2014, ದಿನಾಂಕ: 11/03/2015.

3) ವ್ಯವಸ್ಥಾಪಕ ನಿರ್ದೇಶಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ(ನಿ), ಬೆಂಗಳೂರು ಇವರ ಪ್ರಸ್ತಾವನೆ ಸಂಖ್ಯೆ: ದೇಹಿನಿ/ದೋಘಾ/ಸಿಆರ್-21ಬಿ/2015-16, ದಿನಾಂಕ: 22.05.2015

* * *

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ(1)ರಂತೆ 2014-15ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಕಂಡಿಕೆ-202, ಉಪ ಕಂಡಿಕೆ-2ರಲ್ಲಿ ಹಿಂದುಳಿದ ವರ್ಗಗಳ ಮಡಿವಾಳ ಸಮಾಜದ ದೋಬಿಘಾಟ್ ಅಭಿವೃದ್ಧಿ ಪಡಿಸಲು ಕ್ರಮ ಕೈಗೊಳ್ಳಲಾಗುವುದೆಂದು ಘೋಷಣೆ ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(2)ರ ಸರ್ಕಾರದ ಆದೇಶದಲ್ಲಿ 2014-15ನೇ ಸಾಲಿನ ಪೂರಕ ಅಂದಾಜು-2ರಲ್ಲಿ ಷೇರು ಬಂಡವಾಳ ಲೆಕ್ಕ ಶೀರ್ಷಿಕೆ:4225-03-190-0-01 ರಲ್ಲಿ ಮೊತ್ತ ರೂ.1500.00ಲಕ್ಷಗಳು ಮತ್ತು ಸಹಾಯಧನದ ಲೆಕ್ಕ ಶೀರ್ಷಿಕೆ-2225-03-190-0-04ರಲ್ಲಿ ಮೊತ್ತ ರೂ.1450.00ಲಕ್ಷಗಳನ್ನು ಒದಗಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(3)ರಂತೆ ವ್ಯವಸ್ಥಾಪಕ ನಿರ್ದೇಶಕರು, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವರು, ಹಿಂದುಳಿದ ವರ್ಗಗಳ ಮಡಿವಾಳ ಸಮಾಜದವರ ದೋಬಿ ಘಾಟ್ ಅಭಿವೃದ್ಧಿಪಡಿಸಲು ರೂಪಿಸಿರುವ ಮಾರ್ಗಸೂಚಿಗೆ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಆದೇಶ ಸಂಖ್ಯೆ: ಹಿಂವಕ 567 ಬಿಎಂಎಸ್ 2015, ಬೆಂಗಳೂರು, ದಿನಾಂಕ: 30.11.2015**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ ಹಿಂದುಳಿದ ವರ್ಗಗಳ ಮಡಿವಾಳ ಸಮಾಜದವರ ದೋಬಿ ಘಾಟ್ ಅಭಿವೃದ್ಧಿಪಡಿಸಲು ರೂಪಿಸಿರುವ ಮಾರ್ಗಸೂಚಿಗೆ ಅನುಮೋದನೆ ನೀಡಿ ಹಾಗೂ ಈ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಅನುಬಂಧದಲ್ಲಿ ಲಗತ್ತಿಸಿದ ಮಾರ್ಗಸೂಚಿಗಳಿಗೆ ನಿಗಮಕ್ಕೆ ಒದಗಿಸಿರುವ ಅನುದಾನದ ಮಿತಿಯಲ್ಲಿಯೇ ಈ ಕಾರ್ಯಕ್ರಮ ಜಾರಿಗೊಳಿಸತಕ್ಕದ್ದೆಂಬ ಷರತ್ತಿಗೊಳಪಟ್ಟು ಅನುಮೋದನೆ ನೀಡಿ ಆದೇಶಿಸಿದೆ.

..2

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 576 ವೆಚ್ಚ-3/2015, ದಿ.01.07.2015ರ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರು
ಮತ್ತು ಅವರ ಹೆಸರಿನಲ್ಲಿ.

(ಆರ್.ಭಾಸ್ಕರ್)
ಸರ್ಕಾರದ ಅಧೀನ ಕಾರ್ಯದರ್ಶಿ-2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಗೆ:

1. ಮಹಾಲೇಖಪಾಲರು, (ಎ ಮತ್ತು ಇ, ಲೆಕ್ಕ ಪರಿಶೋಧನೆ-1 ಮತ್ತು 2) ಕರ್ನಾಟಕ ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
3. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ), ವಿಧಾನ ಸೌಧ.
6. ರಾಜ್ಯ ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
7. ಉಪ ನಿರ್ದೇಶಕರು, ಖಜಾನೆ ನೆಟ್‌ವರ್ಕ್, ಮ್ಯಾನೇಜ್‌ಮೆಂಟ್ ಕೇಂದ್ರ, 2ನೇ ಮಹಡಿ, ಸೌತ್ ಬ್ಲಾಕ್, ಖನಿಜ ಭವನ, ದೇವರಾಜ ಅರಸು ರಸ್ತೆ, ಬೆಂಗಳೂರು.
8. ಆಂತರಿಕ ಆರ್ಥಿಕ ಸಲಹೆಗಾರರ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ವಿಕಾಸಸೌಧ.
9. ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
10. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ.
11. ಸರ್ಕಾರದ ಉಪ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರು, ವಿಕಾಸಸೌಧ.
12. ಸರ್ಕಾರದ ಅಧೀನ ಕಾರ್ಯದರ್ಶಿ-1 ಮತ್ತು 2, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ವಿಕಾಸಸೌಧ.
13. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

-----

ಅನುಬಂಧ

ಸರ್ಕಾರದ ಆದೇಶ ಸಂಖ್ಯೆ: ಹಿಂವಕ 567 ಬಿಎಂಎಸ್ 2015, ಬೆಂಗಳೂರು, ದಿನಾಂಕ 30.11.2015

**ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಅನುಷ್ಠಾನಗೊಳಿಸುತ್ತಿರುವ ಮಡಿವಾಳ ಸಮಾಜದವರ ಧೋಬಿಘಾಟ್‌ಗಳನ್ನು ಅಭಿವೃದ್ಧಿ ಪಡಿಸಲು ಕ್ರಮ ಕೈಗೊಳ್ಳವುದಾಗಿ ಸನ್ಮಾನ್ಯ ಮುಖ್ಯಮಂತ್ರಿಯವರು ಆಯವ್ಯಯದ ಭಾಷಣದಲ್ಲಿ ಘೋಷಿರುವ ಬಗ್ಗೆ ಹಾಗೂ ಈ ಘೋಷಣೆ ಅನುಷ್ಠಾನಗೊಳಿಸಲು ಅಗತ್ಯ ಅನುದಾನ ಬಿಡುಗಡೆ ಮಾಡುವ ಬಗ್ಗೆ ರೂಪಿಸಲಾದ ಕಾರ್ಯಕ್ರಮದ ನಿಯಮ ಮತ್ತು ಮಾರ್ಗಸೂಚಿಗಳು.**

ಪ್ರಸ್ತಾವನೆ:

ಸನ್ಮಾನ್ಯ ಮುಖ್ಯಮಂತ್ರಿಯವರ 2014-15ನೇ ಸಾಲಿನ ಆಯವ್ಯಯದ ಭಾಷಣದ ಕಂಡಿಕೆ-202ರಲ್ಲಿನ **"ಮಡಿವಾಳ ಸಮಾಜದವರ ಧೋಬಿಘಾಟ್‌ಗಳನ್ನು ಅಭಿವೃದ್ಧಿ ಪಡಿಸಲು ಕ್ರಮ ಕೈಗೊಳ್ಳಲಾಗುವುದೆಂದು"** ಘೋಷಿಸಲಾಗಿದೆ.

ಸನ್ಮಾನ್ಯ ಮುಖ್ಯಮಂತ್ರಿಯ ಘೋಷಣೆಯಂತೆ ಮಡಿವಾಳ ಸಮುದಾಯದವರು ತೊಡಗಿಕೊಂಡಿರುವ ಸಾಂಪ್ರದಾಯಿಕ ವೃತ್ತಿಯನ್ನು ಕೈಗೊಳ್ಳಲು ಧೋಬಿಘಾಟ್‌ಗಳನ್ನು ಅಭಿವೃದ್ಧಿ ಪಡಿಸಲು ಕಾರ್ಯಕ್ರಮವನ್ನು ರೂಪಿಸಿದೆ. ಕಾರ್ಯಕ್ರಮದ ನಿಯಮ/ನಿಬಂಧನೆ ಮತ್ತು ಮಾರ್ಗಸೂಚಿಗಳು ಈ ಕೆಳಕಂಡಂತೆ ಇವೆ.

1. **ಯೋಜನೆ ಉದ್ದೇಶ:** ಹಿಂದುಳಿದ ವರ್ಗಗಳ ಪ್ರವರ್ಗ-2ಎಗೆ ಸೇರಿದ ಮಡಿವಾಳ ಸಮಾಜದವರು ಅವರ ವೃತ್ತಿ ನಿರ್ವಹಿಸಲು ದೋಬಿ ಘಾಟ್ ನಿರ್ಮಿಸಲು ಆರ್ಥಿಕ ನೆರವು ಒದಗಿಸುವುದು.
2. **ಈ ಯೋಜನೆಯಲ್ಲಿ ಪ್ರಯೋಜನ ಪಡೆಯಲು ಇರಬೇಕಾದ ಅರ್ಹತೆಗಳು:**

ಅ. ಈ ಯೋಜನೆಯಲ್ಲಿ ಆರ್ಥಿಕ ಸಹಾಯ ಪಡೆಯಲು ಅಭ್ಯರ್ಥಿಯು ದಿನಾಂಕ 30/03/2002ರ ಆದೇಶ ಸಂಖ್ಯೆ/ಎಸ್‌ಡಬ್ಲ್ಯೂಡಿ/228/ಬಿಸಿಎ/2000 ಆದೇಶದನ್ವಯ ಪ್ರವರ್ಗ-2ಎನಲ್ಲಿ ಬರುವ ಮಡಿವಾಳ ಮತ್ತು ಅದರ ಉಪ ಜಾತಿಗಳಿಗೆ ಸೇರಿದವರಾಗಿರಬೇಕು.

ಆ. ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ಗ್ರಾಮೀಣ ಪ್ರದೇಶದವರಾದರೆ ರೂ.40,000/-ಗಳ ಹಾಗೂ ನಗರ ಪ್ರದೇಶದವರಿಗೆ ರೂ.55,000/-ಗಳನ್ನು ಮೀರಿರಬಾರದು.

ಇ. ಕರ್ನಾಟಕ ರಾಜ್ಯದಲ್ಲಿ ಕನಿಷ್ಠ 10 ವರ್ಷ ವಾಸವಾಗಿರಬೇಕು.

ಈ. ಅರ್ಜಿದಾರರು ದೋಬಿ ವೃತ್ತಿಯನ್ನು ನಿರ್ವಹಿಸುತ್ತಿರುಬೇಕು.

ಉ. ಅರ್ಜಿದಾರರ ವಯಸ್ಸು ಕನಿಷ್ಠ 18 ವರ್ಷಗಳು ಹಾಗೂ ಗರಿಷ್ಠ 55 ವರ್ಷಗಳ ಮಿತಿಯೊಳಗಿರಬೇಕು.

ಊ. ಈ ಉದ್ದೇಶಕ್ಕಾಗಿ ಸರ್ಕಾರದ/ನಿಗಮದ ಬೇರೆ ಯಾವುದಾದರೂ ಯೋಜನೆಗಳಲ್ಲಿ ಸಾಲ ಅಥವಾ ಇತರೆ ಆರ್ಥಿಕ ಸವಲತ್ತು ಪಡೆದಿರಬಾರದು.

ಋ. ಮಹಿಳೆಯರಿಗೆ ಈ ಯೋಜನೆಯಲ್ಲಿ ಶೇ.33ರಷ್ಟು ಮೀಸಲು ನಿಗದಿಪಡಿಸಿದೆ.

ಎ. ಅಂಗವಿಕಲರಿಗೆ ಈ ಯೋಜನೆಯಲ್ಲಿ ಶೇ.3ರಷ್ಟು ಮೀಸಲು ನಿಗದಿಪಡಿಸಿದೆ.

ಏ. ದೋಬಿ ವೃತ್ತಿಯನ್ನು ನಿರ್ವಹಿಸುವವರು ಸಹಕಾರ ಸಂಘ/ಸ್ವ ಸಹಾಯ ಸಂಘ/ಮಡಿವಾಳ ಸಮಾಜದ ನೋಂದಾಯಿತ ಸಂಸ್ಥೆಯ ಹೆಸರಿನಲ್ಲಿ ಕಡ್ಡಾಯವಾಗಿ ರಾಷ್ಟ್ರೀಕೃತ ಬ್ಯಾಂಕ್/ಶೆಡ್ಯೂಲ್ ಬ್ಯಾಂಕ್‌ನಲ್ಲಿ ಉಳಿತಾಯ ಖಾತೆ ಹೊಂದಿರಬೇಕು.

ಐ. ಮಡಿವಾಳ ಸಮಾಜದವರು ತಾಲ್ಲೂಕು ಮತ್ತು ಪಟ್ಟಣ ಪ್ರದೇಶಗಳಲ್ಲಿ ಸುಮಾರು 10 ರಿಂದ 25 ಕುಟುಂಬಗಳು ಸೇರಿ ಒಂದೇ ಕಡೆ ದೋಬಿ ವೃತ್ತಿ ನಿರ್ವಹಿಸುತ್ತಿರಬೇಕು.

ಒ. ಸಹಕಾರ ಸಂಘ/ಸ್ವ ಸಹಾಯ ಸಂಘ/ಮಡಿವಾಳ ಸಮಾಜದ ನೋಂದಾಯಿತ ಸಂಸ್ಥೆಯು ಸಾರ್ವಜನಿಕರ ಸಂಪರ್ಕಕ್ಕೆ ಅನುಕೂಲಕರವಾದ ಜಾಗವನ್ನು ಗುರುತಿಸಿಕೊಂಡು ನಗರಸಭೆ/ಪುರಸಭೆಗಳಿಂದ ದೋಬಿ ಘಾಟ್ ಉದ್ದೇಶಕ್ಕೆ ಸೂಕ್ತ ವಿಸ್ತೀರ್ಣದ ನಿವೇಶನ/ಜಾಗ ಹೊಂದಿರಬೇಕು ಅಥವ ಸಂಬಂಧಿಸಿದ ಪ್ರಾಧಿಕಾರದಿಂದ ಮಂಜೂರಾತಿ ಪಡೆದುಕೊಂಡಿರಬೇಕು.

ಓ. ನೀರು ಸೌಕರ್ಯಕ್ಕೆ ಪಟ್ಟಣ/ನಗರ ನೀರು ಸರಬರಾಜು ಮೂಲದಿಂದ ಪಡೆದುಕೊಳ್ಳುವುದು.

ಔ. ಪಟ್ಟಣದ ನೀರು ಸರಬರಾಜು ಯೋಜನೆಯಲ್ಲಿ ನೀರು ಸರಬರಾಜು ಲಭ್ಯವಾಗದಿದ್ದಲ್ಲಿ, ನಿವೇಶನದಲ್ಲಿ ಕೊಳವೆಬಾವಿ ಕೊರೆಯಿಸಿ, ಪಂಪು ಮೋಟಾರ್ ಅಳವಡಿಸಿ ಓವರ್‌ಹೆಡ್ ಟ್ಯಾಂಕಿಗೆ ನೀರು ಸರಬರಾಜು ಮಾಡಿಕೊಳ್ಳುವ ಮೂಲಕ ನೀರಿನ ಸೌಕರ್ಯ ಒದಗಿಸಿಕೊಳ್ಳಬೇಕು.

ಕ. ನಿಗಮದ ನಿರ್ದೇಶಕ ಮಂಡಳಿಯು ಕಾಲಕಾಲಕ್ಕೆ ವಿಧಿಸುವ ಇನ್ನಿತರ ಅರ್ಹತೆಗಳನ್ನು ಹೊಂದಿದವರಾಗಿರಬೇಕು.

3. **ಘಟಕ ವೆಚ್ಚ:**

ದೋಬಿಘಾಟ್ ನಿರ್ಮಾಣ ಸ್ಥಳ, ಬಟ್ಟೆ ತೊಳೆಯಲು ಪ್ಲಾಟ್ ಫಾರಂ ನಿರ್ಮಾಣ, ನೀರು ಸಂಗ್ರಹಣ ತೊಟ್ಟಿ, ನೀರಿನ ಸೌಲಭ್ಯ, ಓವರ್ ಹೆಡ್ ಟ್ಯಾಂಕ್ ನಿರ್ಮಾಣ, ನೀರು ಸರಬರಾಜಿಗೆ ಪೈಪ್‌ಲೈನ್, ವಿಶ್ರಾಂತಿ ಕೊಠಡಿ ಹಾಗೂ ಇಸ್ತ್ರೀ ಮಾಡಲು ಪ್ಲಾಟ್ ಫಾರ್ಂ, ಶೌಚಲಯ, ಮಲಿನ ನೀರು ಹೊರ ಹಾಕುವ ಚರಂಡಿ ವ್ಯವಸ್ಥೆ, ಫೆನ್ಸಿಂಗ್ ವ್ಯವಸ್ಥೆ, ದೋಬಿ ಘಾಟ್ ಸೂಕ್ತ ರಕ್ಷಣೆಗೆ ತಂತಿ ಬೇಲಿ ಅಥವ ಕಾಂಪೌಂಡ್ ನಿರ್ಮಾಣ ಎಲ್ಲಾ ಸೇರಿ **ಒಟ್ಟು** ರೂ.8.50ಲಕ್ಷಗಳು. ಇದರಲ್ಲಿ ಶೇ.50ರಷ್ಟು ರೂ.4.25ಲಕ್ಷಗಳ ಸಹಾಯಧನ ಹಾಗೂ ಶೇ.50ರಷ್ಟು ರೂ.4.25ಲಕ್ಷಗಳು ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ಸಾಲವಾಗಿರುತ್ತದೆ.

4. **ದೋಬಿಘಾಟ್ ನಿರ್ಮಾಣದಲ್ಲಿ ಒಳಗೊಂಡಿರುವ ಕಾಮಗಾರಿಗಳು ಈ ಕೆಳಕಂಡಂತೆ ಇವೆ.**

1) ದೋಬಿಘಾಟ್ ನಿರ್ಮಾಣಕ್ಕೆ ಲಭ್ಯವಿರುವ ಜಾಗ/ನಿವೇಶನದಲ್ಲಿ ದೋಬಿಘಾಟ್ ನಿರ್ಮಾಣ ಮಾಡುವುದು.

2) ನೀರು ಸೌಕರ್ಯಕ್ಕೆ ಪಟ್ಟಣ/ನಗರ ನೀರು ಸರಬರಾಜು ಮೂಲದಿಂದ ಪಡೆದುಕೊಳ್ಳುವುದು. ಸಂಬಂಧಿಸಿದ ಪ್ರಾಧಿಕಾರಿಂದ ಮಂಜೂರಾತಿ ಪಡೆದಿರಬೇಕು.

3) ಪಟ್ಟಣದ ನೀರು ಸರಬರಾಜು ಯೋಜನೆಯಲ್ಲಿ ನೀರು ಸರಬರಾಜು ಲಭ್ಯವಾಗದಿದ್ದಲ್ಲಿ, ಕೊಳವೆಬಾವಿ ಕೊರೆಯಿಸಿ, ಪಂಪು ಮೋಟಾರ್ ಅಳವಡಿಸಿ ಓವರ್‌ಹೆಡ್ ಟ್ಯಾಂಕಿಗೆ ನೀರು ಸರಬರಾಜು ಮಾಡಿಕೊಳ್ಳುವ ಮೂಲಕ ನೀರಿನ ಸೌಕರ್ಯ ಒದಗಿಸಿಕೊಳ್ಳಬೇಕು.

4) ನೀರು ಸರಬರಾಜಿನ ಸೌಕರ್ಯವಿದ್ದಲ್ಲಿ, ಹೆಚ್ಚಿನ ನೀರು ಸಂಗ್ರಹಣೆಗೆ ಭೂಮಟ್ಟದಲ್ಲಿ ಸಂಪು/ಟ್ಯಾಂಕ್ ನಿರ್ಮಿಸುವುದು.

5) ಸಂಪು/ಟ್ಯಾಂಕ್‌ನಲ್ಲಿರುವ ನೀರನ್ನು ಬಟ್ಟೆ ತೊಳೆಯುವ ಪ್ಲಾಟ್‌ಫಾರಂ ಪಕ್ಕದಲ್ಲಿ ನಿರ್ಮಿಸಿರುವ ಸಣ್ಣ ಸಣ್ಣ ನೀರಿನ ತೊಟ್ಟಿಗಳಿಗೆ ಸರಬರಾಜ ಆಗುವಂತೆ ಮಾಡಲು ಒವರ್‌ಹೆಡ್ ಟ್ಯಾಂಕ್ ನಿರ್ಮಿಸಿ, ಮೋಟಾರ್ ಅಳವಡಿಸುವುದು.

6) ಒಂದೇ ಸಮಯದಲ್ಲಿ ಸುಮಾರು 10 ಜನ ಕೆಲಸ ನಿರ್ವಹಿಸಲು ಬೇಕಾಗಿರುವ ಕಲ್ಲಿನ ಪ್ಲಾಟ್‌ಫಾರಂ, ನೀರಿನ ಟ್ಯಾಂಕ್ ಹಾಗೂ ತೊಳೆದ ಬಟ್ಟೆಗಳನ್ನು ಒಣಗಿಸಲು ಸ್ಥಳಾವಕಾಶ ಕಲ್ಪಿಸಿಕೊಳ್ಳುವುದು. ಬಟ್ಟೆಗಳನ್ನು ಒಣಗಿಸಲು ಅವಶ್ಯವಿರುವ ಸಾಮಾಗ್ರಿಗಳನ್ನು ಒದಗಿಸಿಕೊಳ್ಳುವುದು. (ಹಗ್ಗ, ಕಂಬಗಳು, ಇತ್ಯಾದಿ)

7) ದೋಬಿಘಾಟ್ ಸುತ್ತ ರಕ್ಷಣೆಗೆ ತಂತಿ ಬೇಲಿ ಆಥವ ಕಾಂಪೌಂಡ್ ನಿರ್ಮಿಸುವುದು.

8) ವೃತ್ತಿ ನಿರ್ವಹಿಸುತ್ತಿರುವ ಸಮಯದಲ್ಲಿ ವಿಶ್ರಾಂತಿ ಪಡೆಯಲು ಹಾಗೂ ಅವರ ಬಟ್ಟೆ ಬದಲಾಯಿಸಿಕೊಳ್ಳಲು, ಊಟ, ಉಪಹಾರ ಸೇವಿಸಲು, ಮಳೆ, ಬಿಸಿಲಿನಿಂದ ರಕ್ಷಣೆಗೆ ಮೂಲಭೂತ ಸೌಕರ್ಯವಿರುವ ಒಂದು (12'X12' **ವಿಸ್ತೀರ್ಣದ) ಕೊಠಡಿ** ನಿರ್ಮಿಸುವುದು ಅವಶ್ಯವಿರುತ್ತದೆ.

ಮೇಲ್ಕಂಡ ಕಾಮಗಾರಿಗಳನ್ನು ನಿರ್ವಹಿಸಲು ಪ್ರತಿ ಕಾಮಗಾರಿಗೆ ಈ ಕೆಳಕಂಡಂತೆ ತಗಲುವ ವೆಚ್ಚ ಅಂದಾಜಿಸಲಾಗಿದೆ.

| ಕ್ರ ಸಂ. | ಕಾಮಗಾರಿಗಳು ಮತ್ತು ಒಳಗೊಂಡ ಅಂಶಗಳು | | ತಗಲುವ ಮೊತ್ತ |
|---|---|---|---|
| 1 | ದೋಬಿಘಾಟ್ ನಿರ್ಮಾಣ ಮಾಡುವ ಜಾಗ | : | ಪುರಸಭೆ/ನಗರಸಭೆ ನೀಡಿರುವ ಅಥವಾ ಸಮುದಾಯವರು ಹೊಂದಿರುವ ಜಾಗ |
| 2 | ನೀರಿನ ಸೌಕರ್ಯ<br>1. ಪುರಸಭೆ/ನಗರಸಭೆ ನೀರಿನ ಸರಬರಾಜು ವ್ಯವಸ್ಥೆ ಇದ್ದಲ್ಲಿ ನೀರು ಸಂಗ್ರಹಣೆಗೆ ಭೂ ಮಟ್ಟದಲ್ಲಿ ಸಂಪು ನಿರ್ಮಾಣ.<br>**ಅಥವಾ**<br>2. ಪುರಸಭೆ/ನಗರಸಭೆ ನೀರಿನ ಸರಬರಾಜು ವ್ಯವಸ್ಥೆ ಇಲ್ಲದಿದ್ದಲ್ಲಿ ಕೊಳವೆ ಬಾವಿ ಕೊರೆಯಿಸಿ, ಪಂಪು ಮೋಟಾರ್ ಅಳವಡಿಸುವುದು. | : | ರೂ.2.00ಲಕ್ಷಗಳು |
| 3. | ಬಟ್ಟೆ ತೊಳೆಯುವ ಪ್ಲಾಟ್‌ಫಾರಂಗಳಿಗೆ ಅವಶ್ಯಕತೆ ಅನುಗುಣವಾಗಿ ನೀರು ಸರಬರಾಜು ಪಡೆಯಲು ಓವರ್‌ಹೆಡ್ ಟ್ಯಾಂಕ್ ನಿರ್ಮಾಣ (ಆರ್.ಸಿ.ಸಿ. ಪಿಲ್ಲರ್ ನಿರ್ಮಿಸಿ 10000ಲೀಟರ್ ಅಳತೆಯ ಪಿ.ವಿ.ಸಿ.ಟ್ಯಾಂಕ್ ಅಳವಡಿಸುವುದು) | : | ರೂ.1.50ಲಕ್ಷಗಳು |
| 4. | 10 ಪ್ಲಾಟ್‌ಫಾರಂಗಳು ಹಾಗೂ 10 ಸಂಗ್ರಹಣಾ ತೊಟ್ಟಿಗಳು ನಿರ್ಮಾಣ, ಚರಂಡಿ ನಿರ್ಮಾಣ, ನೀರು ಸರಬರಾಜಿಗೆ ಪೈಪ್ ಲೈನ್ | : | ರೂ.2.00ಲಕ್ಷಗಳು. |

| | | | |
|---|---|---|---|
| | ಅಳವಡಿಸುವುದು ಇತ್ಯಾಧಿ ಕಾಮಗಾರಿಗೆ | | |
| 5. | **ವಿಶ್ರಾಂತಿ ಕೊಠಡಿ ಹಾಗೂ ಇಸ್ತ್ರೀ ಮಾಡಲು ಫ್ಲಾಟ್‌ಫಾರಂ ನಿರ್ಮಾಣಕ್ಕೆ (ಶೌಚಾಲಯ ಸೇರಿದಂತೆ)** ವೃತ್ತಿ ನಿರ್ವಹಿಸುತ್ತಿರುವ ಸಮಯದಲ್ಲಿ ವಿಶ್ರಾಂತಿ ಪಡೆಯಲು ಹಾಗೂ ಅವರ ಬಟ್ಟೆ ಬದಲಾಯಿಸಿಕೊಳ್ಳಲು, ಊಟ, ಉಪಹಾರ ಸೇವಿಸಲು, ಮಳೆ, ಬಿಸಿಲಿನಿಂದ ರಕ್ಷಣೆಗೆ ಮೂಲಭೂತ ಸೌಕರ್ಯವಿರುವ ಒಂದು (12'X12' ವಿಸ್ತೀರ್ಣದ) ಕೊಠಡಿ ನಿರ್ಮಾಣ. | : | ರೂ.2.00ಲಕ್ಷಗಳು |
| 5 | ದೋಬಿಘಾಟ್ ಸುತ್ತ ರಕ್ಷಣೆಗೆ ತಂತಿ ಬೇಲಿ ಅಥವ ಕಾಂಪೌಂಡ್ ನಿರ್ಮಿಸುವುದು | : | ರೂ.1.00ಲಕ್ಷಗಳು |
| | **ಕಾಮಗಾರಿಗೆ ತಗಲುವ ಒಟ್ಟು ಮೊತ್ತ** | : | **ರೂ.8.50ಲಕ್ಷಗಳು.** |

**5. ಫಲಾನುಭವಿಗಳ ಆಯ್ಕೆ ಮತ್ತು ಯೋಜನೆ ಅನುಷ್ಠಾನ:**

ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ರಚಿಸಿರುವ ವಿಧಾನಸಭಾ ಕ್ಷೇತ್ರದ ಆಯ್ಕೆ ಸಮಿತಿ ಮೂಲಕ ಸಹಕಾರ ಸಂಘ/ಸ್ವ ಸಹಾಯ ಸಂಘ/ಮಡಿವಾಳ ಸಮಾಜದ ನೋಂದಾಯಿತ ಸಂಸ್ಥೆ ಮೂಲಕ ಅಯ್ಕೆ ಮಾಡಲಾಗುವುದು.

**6. ಆಯ್ಕೆ ಸಮಿತಿಯ ಕರ್ತವ್ಯಗಳು:**

1. ಆಯ್ಕೆ ಸಮಿತಿಯ ಈ ಯೋಜನೆಯಲ್ಲಿ ನಿಗದಿಪಡಿಸಿದ ಗುರಿಯನ್ವಯ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಚಾರ ನೀಡಿ ಅರ್ಜಿಗಳನ್ನು ಆಹ್ವಾನಿಸಿ, ನಿಗದಿತ ಅವಧಿಯೊಳಗೆ ಅರ್ಜಿಗಳನ್ನು ಸ್ವೀಕರಿಸುವುದು.
2. ಜಿಲ್ಲಾ ವ್ಯವಸ್ಥಾಪಕರು ಪಡೆದ ಅರ್ಜಿಗಳನ್ನು ನಿಯಮಗಳನ್ವಯ ಪರಿಶೀಲಿಸಿ ಅಗತ್ಯ ಎಲ್ಲಾ ದಾಖಲಾತಿಗಳನ್ನು ಒದಗಿಸಿರುವ ಬಗ್ಗೆ ದೃಡೀಕರಿಸಿಕೊಂಡು ಅಂತಹ ಅರ್ಜಿಗಳನ್ನು ಆಯ್ಕೆ ಸಮಿತಿ ಮುಂದೆ ಪಟ್ಟಿ ಮಾಡಿ ಮಂಡಿಸಬೇಕು.
3. ಮಡಿವಾಳ ವೃತ್ತಿ/ದೋಬಿ ವೃತ್ತಿ ನಿರ್ವಹಿಸುತ್ತಿರುವ, ಸೌಲಭ್ಯವನ್ನು ಸದಪಯೋಗ ಪಡಿಸಿಕೊಳ್ಳುವಂತಹ ಇಚ್ಛಾಶಕ್ತಿಯುಳ್ಳ ಅರ್ಹ ಫಲಾನುಭವಿಗಳನ್ನು/ಸ್ವಸಹಾಯ ಗುಂಪುಗಳನ್ನು ಆಯ್ಕೆ ಮಾಡಬೇಕು.
4. ಆಯ್ಕೆ ಸಮಿತಿಯು ಅರ್ಜಿಗಳನ್ನು ಪರಿಶೀಲಿಸಿ ದೋಬಿಘಾಟ್ ನಿರ್ಮಾಣಕ್ಕೆ ಸಂಬಂಧಿಸಿದ ಪ್ರಾಧಿಕಾರದಿಂದ ನೀರಾಪೇಕ್ಷಣಾ ಪತ್ರ, ನೀರಿನ ಸೌಲಭ್ಯ, ವಿದ್ಯುತ್ ಸಂಪರ್ಕ ಮುಂತಾದವುಗಳ ಬಗ್ಗೆ ಪರಿಶೀಲಿಸಿ ಅರ್ಹ ಸಹಕಾರ ಸಂಘ/ಸ್ವ ಸಹಾಯ ಸಂಘ/ಮಡಿವಾಳ ಸಮಾಜದ ನೋಂದಾಯಿತ ಸಂಸ್ಥೆಯನ್ನು ಆಯ್ಕೆ ಮಾಡಿ, ದೋಬಿ ಘಾಟ್ ನಿರ್ಮಣಕ್ಕೆ ಸಂಬಂಧಿಸಿದಂತೆ, ಜಿಲ್ಲಾ ಪಂಚಾಯತ್ ಇಂಜಿನಿಯರ್ ವಿಭಾಗದಿಂದ ಅಂದಾಜು ತಯಾರಿಸಿ, ಆಯ್ಕೆ ಸಮಿತಿ ಅನುಮೋದನೆ ಪಡೆದು ಒಟ್ಟು ಸೌಲಭ್ಯಕ್ಕೆ ಮಂಜೂರು ಮಾಡುವುದು.

5. ಸಮಿತಿ ಮಂಜೂರು ಮಾಡಿದ ಪ್ರಸ್ತಾವನೆಯನ್ನು ಅಂದಾಜು ವೆಚ್ಚದ ತಃಖ್ತೆ ಹಾಗೂ ನೀಲಿ ನಕ್ಷೆ, ಮತ್ತು ಫಲಾನುಭವಿಗಳ ವಿವರಗಳನ್ನು ನಮೂದಿಸಿ ಸೌಲಭ್ಯದ ಮಂಜೂರಾತಿಗೆ ನಿಗಮದ ಕೇಂದ್ರ ಕಛೇರಿಗೆ ಪ್ರಸ್ತಾವನೆ ಕಳುಹಿಸಬೇಕು.

6. **ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು:** ಹಿಂದುಳಿದ ವರ್ಗಗಳ ಸೇರಿದ ಪ್ರವರ್ಗ-2ಎನಲ್ಲಿ ಬರುವ ಮಡಿವಾಳ ಮತ್ತು ಅದರ ಉಪ ಜಾತಿಗೆ ಸೇರಿದ ಅರ್ಹ ಅಭ್ಯರ್ಥಿಗಳು ಅರ್ಜಿಯೊಂದಿಗೆ ಈ ಕೆಳಕಂಡ ದಾಖಲಾತಿಗಳನ್ನು ಸಲ್ಲಿಸಬೇಕು.

1. ಅರ್ಜಿದಾರರು ಹಿಂದುಳಿದ ವರ್ಗಗಳಿಗೆ ಸೇರಿರುವುದಕ್ಕೆ ಸಂಬಂಧಿಸಿದ ತಾಲ್ಲೂಕು ತಹಶಿಲ್ದಾರ್ ರಿಂದ ನಿಗದಿತ ನಮೂನೆಯಲ್ಲಿ ಪಡೆದ ಜಾತಿ/ಕುಟುಂಬದ ವಾರ್ಷಿಕ ಆದಾಯ ಪ್ರಮಾಣ ಪತ್ರ.
2. ಸಹಕಾರ ಸಂಘ/ಸ್ವಸಹಾಯ ಸಂಘ/ಮಡಿವಾಳ ಸಮಾಜದ ನೋಂದಾಯಿತ ಸಂಸ್ಥೆಯು ಸಹಕಾರ ಸಂಘ ಕಾಯ್ದೆ ಅನ್ವಯ ನೋಂದಣಿಯಾಗಿರಬೇಕು. ನೋಂದಣಿಯಾದ ಸಂಘದ ನೋಂದಣಿ ಪ್ರಮಾಣದ ಪತ್ರದ ದೃಢೀಕೃತ ಪ್ರತಿ.
3. ಸಹಕಾರ ಸಂಘದ ಬೈಲಾ ಪ್ರತಿ ಒದಗಿಸಬೇಕು.
4. ಸಹಕಾರ ಸಂಘವು ಸ್ಥಾಪನೆಯಾಗಿ ಕನಿಷ್ಠ 3 ವರ್ಷಗಳಾಗಿರಬೇಕು. ಹಾಗೂ 3 ವರ್ಷಗಳ ಲೆಕ್ಕ ಪರಿಶೋಧನಾ ವರದಿ ನೀಡಬೇಕು.
5. ಅರ್ಜಿದಾರರು ಮಡಿವಾಳ ವೃತ್ತಿ/ದೋಬಿ ವೃತ್ತಿ ನಿರ್ವಹಿಸುತ್ತಿರುವ ಬಗ್ಗೆ ಸ್ವಯಂ ದೃಢೀಕರಣ ನೀಡಬೇಕು.
6. ಅರ್ಜಿದಾರರ ವಾಸದ ಪುರಾವೆಗಾಗಿ ಪಡಿತರ ಚೀಟಿ/ಚುನಾವಣಾ ಗುರುತಿನ ಚೀಟಿ/ಆಧಾರ ಕಾರ್ಡ್‌ನ ಧೃಡೀಕೃತ ಪ್ರತಿ ಒದಗಿಸಬೇಕು.
7. ಅರ್ಜಿದಾರರ ಪಾಸ್ ಪೋರ್ಟ್ ಅಳತೆಯ ಇತ್ತೀಚಿನ 3 ಫೋಟೋಗಳು.
8. ಸಹಕಾರ ಸಂಘವು ಕಡ್ಡಾಯವಾಗಿ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಉಳಿತಾಯ ಖಾತೆ ಹೊಂದಿರಬೇಕು. ಪುರಾವೆಗಾಗಿ ಚಾಲ್ತಿಯಲ್ಲಿರುವ ಬ್ಯಾಂಕ್ ಪಾಸ್ ಪುಸ್ತಕದ ಜೆರಾಕ್ಸ್ ಪ್ರತಿ ನೀಡಬೇಕು.
9. ದೋಬಿಘಾಟ್ ಕಾಮುಗಾರಿ ಪೂರ್ಣಗೊಂಡ ನಂತರ ಅದನ್ನು ಯಾವುದೇ ಅಡಚಣೆಗಳಿಗೆ ಅಸ್ಪದ ನೀಡದೆ ನಿರ್ವಹಿಸಿಕೊಂಡು ಹೊಗುವ ಬಗ್ಗೆ ಮುಚ್ಚಳಿಕೆ ಪತ್ರ (Notary) ಸಲ್ಲಿಸಬೇಕು.

**10. ಸೌಲಭ್ಯ ಮಂಜೂರಾತಿ ವಿಧಾನ:**

a) ನಿಗಮದ ಕೇಂದ್ರ ಕಛೇರಿಯಿಂದ ಅರ್ಜಿಗಳನ್ನು ಆಹ್ವಾನಿಸಿ ಜಾಹಿರಾತು ನೀಡುವುದು. ಜಿಲ್ಲಾ ವ್ಯವಸ್ಥಾಪಕರು ಸ್ವೀಕರಿಸಿದ ಅರ್ಜಿಗಳನ್ನು ಅನುಕ್ರಮವಾಗಿ ಸ್ವೀಕೃತಿ ರಿಜಿಸ್ಟರ್‌ನಲ್ಲಿ ದಾಖಲಿಸಬೇಕು.

b) ಅರ್ಹ ಅರ್ಜಿಗಳನ್ನು ಪೂರ್ಣ ವಿವರಗಳೊಂದಿಗೆ ಪಟ್ಟಿ ಮಾಡಿ ಆಯ್ಕೆ ಸಮಿತಿಗೆ ಮಂಡಿಸುವುದು.

c) ಆಯ್ಕೆ ಮಾಡಿದ ಪಟ್ಟಿಯನ್ನು ಮತ್ತು ಅಗತ್ಯ ದಾಖಲಾತಿಗಳನ್ನು ಜಿಲ್ಲಾ ವ್ಯವಸ್ಥಾಪಕರು ಕೇಂದ್ರ ಕಛೇರಿಗೆ ಪ್ರಸ್ತಾವನೆಯೊಂದಿಗೆ ಕಳುಹಿಸಿಕೊಡಬೇಕು.

d) ನಿಗಮದ ಕೇಂದ್ರ ಕಛೇರಿಯಲ್ಲಿ ತಾಂತ್ರಿಕ ವಿಭಾಗದವರು ಪ್ರಸ್ತಾವನೆಯನ್ನು ಮತ್ತು ಅಂದಾಜು ವೆಚ್ಚವನ್ನು ಪರಿಶೀಲಿಸಿ ಒಟ್ಟು ಮೊತ್ತಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗುವುದು.

e) ನಿಗಮದ ಕೇಂದ್ರ ಕಛೇರಿಯಲ್ಲಿ ತಾಂತ್ರಿಕ ವಿಭಾಗದವರು ದೋಬಿ ಘಾಟ್ ನಿರ್ಮಿಸಲು ಆಡಳಿತಾತ್ಮಕ ಮಂಜೂರಾತಿ ಆದೇಶದನ್ವಯ ಸ್ಥಳೀಯ ಗುತ್ತಿಗೆದಾರರಿಂದ ಕಾಮಗಾರಿ ನಿರ್ವಹಿಸಲು ಪಾರದರ್ಶಕವಾಗಿ, ದರಪಟ್ಟಿ ಆಹ್ವಾನಿಸಿ, ಗುತ್ತಿಗೆದಾರರನ್ನು ಮತ್ತು ಕಾಮಗಾರಿವಾರು ದರಗಳನ್ನು ನಿಗದಿಪಡಿಸಿ, ಕಾರ್ಯಾದೇಶ ನೀಡುವುದು.

f) ಈ ಕಾರ್ಯಾದೇಶದನ್ವಯ ಗುತ್ತಿಗೆದಾರರಿಗೆ ಕಾಮಗಾರಿ ವೆಚ್ಚವನ್ನು 3 ಹಂತಗಳಲ್ಲಿ ನಿಗಮದ ಜಿಲ್ಲಾ ವ್ಯವಸ್ಥಾಪಕರು/ಕೇಂದ್ರ ಕಛೇರಿಯ ತಾಂತ್ರಿಕ ವಿಭಾಗದವರ ಸ್ಥಳ ಪರಿಶೀಲನಾ ವರದಿಯನ್ನು ಆಧರಿಸಿ ಹಣ ಬಿಡುಗಡೆ ಮಾಡಲಾಗುವುದು.

g) ಜಿಲ್ಲಾ ವ್ಯವಸ್ಥಾಪಕರು, ಆಡಳಿತಾತ್ಮಕ ಮಂಜೂರಾತಿ ಅನ್ವಯ ದೋಬಿಘಾಟ್ ಘಟಕದ ಹಂತ ಹಂತವಾಗಿ ಪ್ರಗತಿಯನ್ನು ಅಧರಿಸಿ ಹಣ ಬಿಡುಗಡೆಗೆ ಪ್ರಸ್ತಾವನೆಯನ್ನು ಕೇಂದ್ರ ಕಛೇರಿಗೆ ಕಳುಹಿಸುವುದು.

h) ಘಟಕದ ಕಾಮಗಾರಿ ಪೂರ್ಣಗೊಂಡ ನಂತರ ಸಹಕಾರ ಸಂಘದ ಅಥವಾ ಫಲಾನುಭವಿಗಳ ಸಹಿ ಪಡೆದು ಭಾವಚಿತ್ರದೊಂದಿಗೆ ವರದಿಯನ್ನು ಕೇಂದ್ರ ಕಛೇರಿಗೆ ಕಳುಹಿಸುವುದು.

i) ದೋಬಿಘಾಟ್ ನಿರ್ಮಾಣದ ಕಾಮಗಾರಿ ಮಂಜೂರಾತಿ, ಗುತ್ತಿಗೆದಾರರ ನೇಮಕಾತಿ, ನಿರ್ಮಾಣದ ಪ್ರಗತಿ ಹಾಗೂ ಉಸ್ತುವಾರಿಯನ್ನು ನಿಗಮದ ತಾಂತ್ರಿಕ ವಿಭಾಗದಿಂದ ನಿರ್ವಹಿಸುವುದು. ಅಗತ್ಯವಿದ್ದಲ್ಲಿ ಆಯಾ ಜಿಲ್ಲೆಯ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದ ನೆರವು ಪಡೆದು ಅನುಷ್ಠಾನಗೊಳಿಸುವುದು.

j) ಕಾಮಗಾರಿ ಪೂರ್ಣಗೊಂಡ ನಂತರ ಮುಚ್ಚಳಿಕೆ ಪಡೆದು, ಷರತ್ತು ವಿಧಿಸಿ ಹಸ್ತಾಂತರ ಮಾಡುವುದು.

11. **ಮರುಪಾವತಿ:** ಘಟಕ ವೆಚ್ಚದಲ್ಲಿ ಮಂಜೂರು ಮಾಡಿದ **ಶೇ.50ರಷ್ಟು ಸಾಲದ** ಮೊತ್ತವನ್ನು ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ಮರುಪಾವತಿ ಮಾಡಬೇಕು. ಸಾಲದ ಮೊತ್ತವನ್ನು ಘಟಕದಲ್ಲಿ ಸೌಲಭ್ಯ ಹೊಂದುವ ಎಲ್ಲಾ ಫಲಾನುಭವಿಗಳು ಸಮಾಂತರವಾಗಿ 4 ವರ್ಷಗಳ ಅವಧಿಯಲ್ಲಿ ಮಾಸಿಕ ಕಂತುಗಳಲ್ಲಿ ಮರುಪಾವತಿ ಮಾಡುವುದು. ಇದರಲ್ಲಿ 3 ತಿಂಗಳು ವಿರಾಮಾವಧಿಯು ಸೇರಿರುತ್ತದೆ.

12. **ಸೌಲಭ್ಯ ಉಪಯೋಗದ ಬಗ್ಗೆ ಘಟಕ ತಪಾಸಣಾ ವರದಿ:** ನಿಗಮದ ಸಹಾಯಕ ಪ್ರಧಾನ ವ್ಯವಸ್ಥಾಪಕರು ಹಾಗೂ ಜಿಲ್ಲಾ ವ್ಯವಸ್ಥಾಪಕರು ಫಲಾನುಭವಿಗಳು ಪಡೆದ ಸೌಲಭ್ಯ ಸದುಪಯೋಗ ಪಡಿಸಿಕೊಂಡಿರುವ ಬಗ್ಗೆ ಅಗ್ಗಿಂದಾಗ್ಗೆ ಪರಿಶೀಲನೆ ಮಾಡುವುದು.

13. **ನಿಯಮಗಳಿಗೆ ತಿದ್ದುಪಡಿ:** ಈ ಯೋಜನೆ ಅನುಷ್ಠಾನಕ್ಕೆ ಕಾಲಕಾಲಕ್ಕೆ ಅವಶ್ಯವಿರುವ ತಿದ್ದುಪಡಿ/ಮಾರ್ಪಾಡು ಅಥವಾ ಸೇರ್ಪಡೆ ಇತ್ಯಾದಿಗಳನ್ನು ಮಾಡಲು ನಿರ್ದೇಶಕ ಮಂಡಳಿಯು ಅಧಿಕಾರ ಹೊಂದಿರುತ್ತದೆ. ಹಾಲಿ ನಿಯಮಗಳಡಿಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸುವಾಗ ಉದ್ಭವವಾಗುವ ಶಂಕೆ/ಸಂಶಯಗಳನ್ನು ನಿವಾರಿಸಲು ನಿಗಮದ ವ್ಯವಸ್ಥಾಪಕ ನಿರ್ದೇಶಕರು ಸ್ಪಷ್ಟೀಕರಣ ನೀಡಲು ಅಧಿಕಾರ ಹೊಂದಿರುತ್ತಾರೆ.

(ಆರ್. ಭಾಸ್ಕರ್)
ಸರ್ಕಾರದ ಅಧೀನ ಕಾರ್ಯದರ್ಶಿ-2,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.